ಶ್ರೀ ಎಸ್. ಗೊಪಾಲಗೌಡ.—ನಾನೂ ಕೂಡ ಆ ರೀತಿಯ ಒಂದು ಸೂಚನೆಯನ್ನು ಕಳುಹಿಸಿದ್ದೆ. ವಿಷಾದ ಪಟ್ಟಮೇಲೆ ಆ ಶಿಕ್ಷೆಯನ್ನು ರಿಸಿಂಡ್ ಮಾಡೋಣ ಎಂದು ಹೇಳಿ ಸರ್ಕಾರದ ವತಿಯಿಂದ ಭರವಸೆ ಬಂದಿದೆ. ಆದ್ದರಿಂದ ನಾನು ಈಗ ರೂಲ್ 309ರ ಪ್ರಕಾರ ಸಭೆ ಒಪ್ಪುವುದಾದರೆ ಅವರು ಈ ಮನೆಯಿಂದ ಈ ಅಧಿವೇಶನದ ಅವಧಿಯಲ್ಲಿ ಹೊರಗೆ ಇರಬೇಕೆಂದು ಮಾನ್ಯ ಅಧ್ಯಕ್ಷರು ಆಜ್ಞೆ ನೀಡಿದ್ದರೋ ಅದನ್ನು ಹಿಂತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Sri K. PUTTASWAMY (Minister for Parliamentary Affairs).—Sir, I move :

"That the order of suspension of Sri Vatal Nagaraj made by the House on 3rd February 1970 be terminated."

Mr. DEPUTY SPEAKER.—Motion moved :

"That the order of suspension of Sri Vatal Nagaraj made by the House on 3rd February 1970 be terminated."

The motion was adopted.

Business of the House

ಶ್ರೀ ಎಂ. ನಾಗಪ್ಪ.—ಬೆಳಗಾಂ ಬಗ್ಗೆ, ಬೀದರ್ ಬಗ್ಗೆ ಮತ್ತು ಮಹಾಜನ್ ವರದಿ ಬಗ್ಗೆ ನಾನೊಂದು ನಿಲುವಳಿ ಸೂಚನೆ ಕಳಿಸಿದ್ದೇನೆ. ಅಧ್ಯಕ್ಷರು ನಾನು ಕಳಿಸಿರುವ ಸೂಚನೆ ಸಮಂಜಸ ವಲ್ಲವೆಂದು ಭಾವಿಸುವುದಾದರೆ 146 ನೆ ನಿಯಮದ ಪ್ರಕಾರ ಒಂದು ಸಬ್‌ಸ್ಟ್ಯಾಂಟಿವ್ ಮೋಷನ್ ಕಳಿಸಿದ್ದೇನೆ. ಅದು ಈ ರೀತಿ ಇದೆ :

"This House while reiterating its previous resolution urges upon the Government of India to accept the Mahajan Commission Report in toto and implement it forthwith. Any change or deviation is not only not acceptable but to be condemned".

ನಿಲುವಳಿ ಸೂಚನೆಯನ್ನು ಮಂಡಿಸಲು ಅವಕಾಶ ಕೊಟ್ಟರೆ ಮಂಡಿಸುತ್ತೇನೆ ಇಲ್ಲದಿದ್ದರೆ 146ನೇ ನಿಯಮದ ಪ್ರಕಾರ ಮೋಷನ್ ಕಳಿಸಿರುವುದನ್ನು ಮೂವ್ ಮಾಡುತ್ತೇನೆ.

ಉಪಾಧ್ಯಕ್ಷರು.—ಮೋಷನ್ ಮೂವ್ ಮಾಡುವುದಕ್ಕೆ ಅನುಮತಿ ಕೊಡುತ್ತೇನೆ. ಮೊದಲು ಕಾಲ್ ಅಟೆನ್‌ಷನ್ ತೆಗೆದುಕೊಳ್ಳೋಣ.

Calling Attention to a Matter of Urgent Public Importance. *re* : Lathi Charge and Arrest of two Members of Parliament at Gulbarga.

Sri M. NAGAPPA (Raichur).—I call the attention of the Chief Minister to the lathi charge and arrest of two Members of Parliament at Gulbarga.

† Sri K. PUTTASWAMY (Minister for Law, Labour and Parliamentary Affairs).—Sir, on behalf of the Chief Minister I state as follows :—

The District Magistrate issued a prohibitory Order under Section 35 of the Mysore Police Act, in view of some labour unrest in Gulbarga

Town. Sri Darma Rao Afzalpurkar approached the District Magistrate for permission to hold a meeting to be addressed by Sri Chandrasekhar, M.P. and others. The District Magistrate gave permission specifying that the meeting to be addressed by the M.Ps. and others should be hold inside the Town Hall without the aid of amplifiers. At about 6-15 P.M. the Superintendent of Police got information that the meeting was being held out-side the Town Hall using amplifiers. The Police Officers promptly went the spot and told the organizers to hold the meeting inside the Hall without the aid of amplifiers. But one of the organizers told the Police Officers that they had special permission from the District Magistrate. He was asked to produce this order. But he wanted time till the arrival of Sri Afzalpurkar.

Some time later, Sri Afzalpurkar, Sri Chandrasekhar, M.P., Sri Krishnakath, M.P. and others arrived at the spot to start the meeting.

The Assistant Superintendent of Police who was on duty there requested them not to violate the conditions of the licence granted to them for holding the meeting. It is reported that they not only refused to do so but announced on the mike that they would defy the prohibitory order and started of the meeting. After ascertaining from the Office of the District Magistrate that no permission had been issued by the District Magistrate either orally or in writing to conduct the meeting outside the Town Hall with loudspeakers, the Superintendent of Police and the Sub-Divisional Magistrate proceeded to the spot as also the D.I.G, North-Eastern Range. The organisers were again requested to stop the meeting. At that stage a section of the people from the rear of the gathering became violent and started pelting stones. The Sub-Divisonal Magistrate directed the police to disperse the crowd as it had become unlawful. It is further reported that Sri Chandrasekhar had started addressing the meeting and the stone throwing continued. After due warning the crowd had to be dispersed with the help of lathis. One Sub-Inspector and four Police constables were injured as a result of stone throwing and four others received minor-injuries. These were all treated as out-patients.

At 7-00 P.M. Sri Chandrasekhar, M.P., Sri Krishnakant, M.P. and Sri Afzalpurkar were taken into custody and produced before the Joint Magistrate (I Class) along with a petty charge sheet under Section 105 of Mysore Police Act. The Magistrate released the arrested persons unconditionally directing them to appear before the Court when summoned. In view of the fact that the case is before the Court, as regards the incident relating to defying the prohibitory order it may not be desirable to give any further details.

There was absolutely no political motive behind the arrest of these persons. The Members of Parliament were arrested by the local authorities for the alleged violation of the prohibitory order in force at the time.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಸ್ವಲ್ಪ ಕ್ಲಾರಿಫಿಕೇಷನ್ ಕೇಳಬೇಕಾಗಿದೆ. ಅವರು ಅನುಮತಿ ಕೊಟ್ಟಿರುವುದು ಔಟ್‌ಸೈಡ್ ದಿ ಟೌನ್‌ಹಾಲ್ ಬಿಲ್ಡಿಂಗ್ ಅಥವಾ ಎತಿನ್ ದಿ ಟೌನ್ ಹಾಲ್ ಬಿಲ್ಡಿಂಗ್ ಪ್ರೆಮಿನಸ್ಸೇ. ಎರಡನೆಯದು ಕೃಷ್ಣಕಾಂತ್, ಅಫಜಲ್‌ಪುರ್‌ಕರ್, ಕೊಲ್ಲೂರು ಮಲ್ಲಪ್ಪ ಮತ್ತು ಚಂದ್ರಶೇಖರ್ ಈ 4 ಜನರೂ ಕೂಡ ಮಾತನಾಡಿದಮೇರೆ ಚಂದ್ರಶೇಖರ್‌ರವರು 5—10 ನಿಮಿಷಗಳಲ್ಲಿ ತಮ್ಮ ಭಾಷಣವನ್ನು ಮುಗಿಸುವ ಸ್ಟೇಜಿನಲ್ಲಿದ್ದಾಗ ಅರೆಸ್ಟ್ ಮಾಡಿದರೇ ಅಥವಾ ಅವರು ಮಾತನಾಡುವುದಕ್ಕೆ ಶುರು ಮಾಡಿದ ಕೂಡಲೇ ಅದು ಕಾನೂನಿಗೆ ವಿರುದ್ಧ ಎಂದು ತಡೆಗಟ್ಟಿದರೇ? 3 ಜನ ಮಾತ್ರ ಕಾನೂನನ್ನು ವಯೊಲೇಟ್ ಮಾಡಿದರೇ ಅಥವಾ ಕೊಲ್ಲೂರು ಮಲ್ಲಪ್ಪನವರೂ ಕೂಡ ಕಾನೂನನ್ನು ವಯೊಲೇಟ್ ಮಾಡಿದರೇ? ಹಾಗೆ ಮಲ್ಲಪ್ಪನವರೂ ಕೂಡ ಕಾನೂನನ್ನು ವಯೊಲೇಟ್ ಮಾಡಿದ್ದರೆ ಅವರನ್ನು ಬಿಟ್ಟು ಉಳಿದವರನ್ನು ಮಾತ್ರ ಅರೆಸ್ಟ್ ಮಾಡಿರುವುದಕ್ಕೆ ಕಾರಣವೇನು? ಮಲ್ಲಪ್ಪನವರು ಕಾನೂನನ್ನು ವಯೊಲೆಟ್ ಮಾಡಿದರೇ? ಮಾಡಿದ್ದರೆ ಏಕೆ ಅವರನ್ನು ಅರೆಸ್ಟ್ ಮಾಡಲಿಲ್ಲ? ಮೀಟಿಂಗ್ ಶುರುವಾದ ಲಾಗಾಯ್ತು, ಸುಮಾರು ಒಂದು—ಒಂದೂವರೆ ಗಂಟೆ ಕಾಲ ಸಭೆ ಶಾಂತಿಯುತವಾಗಿದ್ದು ಭಾಷಣವನ್ನು ಕೇಳಲಿಲ್ಲವೇ? ಪೋಲೀಸಿನವರು ಆ ಸಭೆಯಲ್ಲಿ ಕುಳಿತು ಭಾಷಣವನ್ನು ಕೇಳಿದರೇ ಅಥವಾ ಇಲ್ಲವೇ? ಪ್ರಾಹಿಬಿಟರಿ ಆರ್ಡರ್‌ಲ್ಲದೆ ಪೋಲೀಸ್ ಆಕ್ಟ್ 35ರ ರೀತ್ಯ ಆರ್ಡರು ಮಾಡಿರುತ್ತಾರೆ, 35ನೇ ಸೆಕ್ಷನ್ನಿನ 3ನೇ ಸಬ್‌ಸೆಕ್ಷನ್ನಿನ ಪ್ರಕಾರ ಸಾರ್ವಜನಿಕ ಸಭೆಯನ್ನು ಪ್ರತಿಬಂಧಿಸಿ, ಅದಕ್ಕೆ ನಿರ್ಬಂಧಮಾಡಿ ಆರ್ಡರು ಮಾಡಿದ್ದಾರೆಯೇ? 35ನೇ ಸೆಕ್ಷನ್ ಜಾರಿಗೆ ಕೊಡತಕ್ಕ ಪ್ರಮಾದ ಪರಿಸ್ಥಿತಿ ಇಡೀ ಗುಲ್ಬರ್ಗದಲ್ಲಿ ಏನಿತ್ತು ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಏನೇನು ಕೃತ್ಯಗಳು ಗುಲ್ಬರ್ಗದಲ್ಲಿ ನಡೆದುವು, 35ನೇ ಸೆಕ್ಷನ್‌ನಂಥ ಮಹಾಸ್ತ್ರವನ್ನು ಜಾರಿಗೆ ಕೊಡಬೇಕಾದರೆ ಮಹತ್ತರವಾದ ಕೃತ್ಯಗಳು ಏನೇನು ನಡೆದುವು, ಎಷ್ಟೆಷ್ಟು ಕತ್ತಿ ಗುರಾಣಿಗಳನ್ನು ತೆಗೆದುಕೊಂಡು ಹೊಡೆದಾಡಿದರು, ಎಷ್ಟು ಜನರ ಪ್ರಾಣಕ್ಕೆ ಅಪಾಯ ಒದಗಿ ಬಂತು, ಎಲ್ಲೆಲ್ಲಿ ಬೆಂಕಿ ಹಚ್ಚಿದರು ಎಲ್ಲೆಲ್ಲಿ ಮನೆಗಳನ್ನು ಸುಟ್ಟು ಹಾಕಿದರು ಎನ್ನುವುದನ್ನು ಕೂಡ ತಿಳಿಸಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಕೇಳಿದಂಥ ಸ್ಪಶ್ಟೆಗಳ ಪೈಕಿ ಕೊನೆಯ ಪ್ರಶ್ನೆಗೆ ಮೊದಲು ಉತ್ತರ ಕೊಡುತ್ತೇನೆ. ಏನೇನು ಕೃತ್ಯಗಳು ನಡೆದುವು, ಯಾವ ಕಾರಣಕ್ಕಾಗಿ 35ನೇ ಸೆಕ್ಷನ್ ಜಾರಿಮಾಡಬೇಕಾಗಿ ಬಂತು ಎನ್ನುವ ವಿವರಗಳನ್ನು ಕೇಳಿದ್ದಾರೆ. ಅದಕ್ಕೆ ಪ್ರತ್ಯೇಕವಾದ ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟರೆ ವಿವರಗಳನ್ನು ಒದಗಿಸುತ್ತೇನೆ.

ಪೋಲೀಸ್ ಆಕ್ಟ್ 35ನೆ ಸೆಕ್ಷನ್ ಪ್ರಕಾರ 12-2-1970ನೇ ದಿನ ಡೆಪ್ಯುಟಿ ಕಮಿಷನರು ನಿಷೇಧಾಜ್ಞೆಯನ್ನು ಹೊರಡಿಸಿದ್ದಾರೆ. 35ೇ ಸೆಕ್ಷನ್ ಎಂದರೆ 35(3) ಕೂಡ ಆಗುತ್ತದೆ.....

ಶ್ರೀ ಎಚ್. ಎಂ. ಚನ್ನಬಸಪ್ಪ.—35ನೇ ಸೆಕ್ಷನ್ ಪ್ರಕಾರವಾಗಿ ಸಾರ್ವಜನಿಕ ಸಭೆಗಳನ್ನು ಪ್ರಾಹಿಬಿಟ್ ಮಾಡಿದ್ದಾರೆಯೇ ಎನ್ನುವುದನ್ನು ಖಚಿತವಾಗಿ ಹೇಳೋಣವಾಗಲಿ.

Sri K. PUTTASWAMY.—I will read a portion of the Order :

"I further prohibit any assembly which comes, under the power of the above 5 prohibited acts, and takingout of processesions in the Municipal limits of Gulbarga City for a period of 15 days coming from 6 A.M. on 12th February 1970 to 11-00 P.M. on 26th February 1970."

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಚನ್ನಬಸಪ್ಪನವರು ಸ್ಪಷ್ಟವಾಗಿ ಕೇಳಿದ್ದಾರೆ. ಪ್ರತಿಬಂಧಕಾಜ್ಞೆಯನ್ನು ಹೊರಡಿಸಿದ್ದಾರೆಯೇ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—35(3)ನೇ ಸೆಕ್ಷನ್ ಪ್ರಕಾರ ಮಾಡಿದ್ದಾರೆಯೇ ಎಂದು ಅವರು ಕೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—35ನೇ ಸೆಕ್ಷನ್ ಪ್ರಕಾರ ಬಹಿರಂಗ ಸಾರ್ವಜನಿಕ ಸಭೆಗಳನ್ನು ಪ್ರಾಹಿಬಿಟ್ ಮಾಡಿದ್ದಾರೆಯೇ ಎಂದು ಕೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—35ನೇ ಸೆಕ್ಷನ್ ಪ್ರಕಾರ ಬಹಿರಂಗ ಸಭೆಗಳನ್ನು ಪ್ರಾಹಿಬಿಟ್ ಮಾಡಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಆರ್ಡರನ್ನು ಓದಿಬಿಡಿ.

ಶ್ರೀ ಕೆ. ಪುಟ್ಟಸ್ವಾಮಿ.—ಓದಬೇಕೋ, ಬೇಡವೋ ಎನ್ನುವುದನ್ನು ನಾನು ತೀರ್ಮಾನ ಮಾಡುತ್ತೇನೆ.

Sri M. N. RAMANNA.—Sir. I am on a point of order. No debate is allowed on this. I want to know from the Hon. Chair whether a debate is allowed on this,

Mr. DEPUTY SPEAKER.—No debate is allowed on this.

ಶ್ರೀ ಕೆ. ಪುಟ್ಟಸ್ವಾಮಿ.—ಚರ್ಚೆಯನ್ನು ಸ್ವಲ್ಪ ಮೊಟಕು ಮಾಡುವ ದೃಷ್ಟಿಯಿಂದ ನಾನು ಆರ್ಡರನ್ನು ಓದುತ್ತೇನೆ. ಏಕೆಂದರೆ ಈ ಆರ್ಡರಿನ ಮೇಲೆ ಏನು ಅಭಿಪ್ರಾಯ ಹೇಳುತ್ತೇನೆ ಅದು ಅಪ್ರಸ್ತುತವಲ್ಲ. ಅದು ಕೋರ್ಟಿನ ಮುಂದೆ ಇದೆ. ಕೋರ್ಟಿನವರು ಆ ಆರ್ಡರಿನ ವ್ಯಾಪ್ತಿ ಏನು ಎನ್ನುವುದನ್ನು ತೀರ್ಮಾನ ಮಾಡಬೇಕಾಗುತ್ತದೆ.

"Whereas it has been made to appear to me that members of the M. S. K. Mill Labour Unions, Gulbarga and the Hyderabad Karnatak Youth Association, Gulbarga are likely to form an assembly and take out procession, etc., in Public streets or other places open to the Public, and that such assembly and procession is likely to lead to a rift, arson, or affray; and whereas disturbances to the public tranquility and breach of public peace is likely to take place if immediate preventive action is not taken; and whereas there is reason to apprehend grave danger to human life and property and disturbance to public tranquility within the limits of Gulbarga City;

I, Pratap Singh, Dardi, I.A.S., District Magistrate, Gulbarga do hereby order under Section 35 of the Mysore Police Act, 1963 in the interest of public peace and tranquility, prohibit for a period of fifteen days commencing from 06-00A.M. of 13th February, 1970 to 26th February, 1970, 11-00 P.M. in Gulbarga City Municipal Limits.

1. the carrying of arms, cudgel, swords, spears, bludgeons, guns, knives sticks, or lathis, or any other article which is capable of being used for causing physical voilence.

2. The carrying of any corrosive substance or of explosives.

3. The carrying, collection and preparation of at once or other missiles or instruments or means of casting or impolling missiles.

4. The public utterance of cries, singing of songs, playing of music, delivery of harangues, the use of gestures or mimotic representations, and the preparation or dissemination of pictures, symbols, placards or any other object or thing, which may in the opinion of such authority offend against decency or morality or public order, or incite to the commission of an offence, or undermine the security of public life and property.

(ಶ್ರೀ ಕೆ. ಪುಟ್ಟಸ್ವಾಮಿ)

I, further, prohibit any assembly which comes, under the power of the above 5 prohibited acts, and taking out of processions in the Municipal limits of Gulbarga City for a period of 15 days commencing from 06.00 A.M. on 12th February 1970 to 11-00 P.M. on 26th February 1970.

If any person goes armed with any such article or carries any corrosive substance or explosive or missile in contravention of such prohibition, he shall be liable to be disarmed or the corrosive substance or explosive or missile shall be liable to be seized from him by any Police Officer, and the article, corrosive substance, explosive or missile so seized shall be forfeited to Government.

Provided that this order is not applicable to funerals and marriage processions;

Provided further that this order shall not apply to Police and Military personnel and such other persons employed for purposes of maintaining and guarding the railway crossings.

This order shall remain in force for a period of fifteen days from 06-00 A.M. on 12th February 1970 to 11-00 P.M. on 26th Febuary 1970.

Given under my hand and seal of the Court this 12th day of February, 1970.

Sd. Pratap Singh Dardi, District. Magistrate, Gulbarga."

2-30 P.M.

ಶ್ರೀ ಎಂ. ನಾಗಪ್ಪ.—ಪತ್ರಿಕೆಗಳಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ಶ್ರೀ ವೈ. ಬಿ. ಚವಾಣರು ಈ ಇನ್‌ಸಿಡೆಂಟ ಬಗ್ಗೆ ತಮ್ಮ ಪ್ರತಿಕ್ರಿಯೆ ವ್ಯಕ್ತ ಪಡಿಸಿದ್ದಾರೆ. ಕೇಂದ್ರ ಸರಕಾರದಲ್ಲಿ ಇರತಕ್ಕಂಥವರು ಮತ್ತು ಅಧಿಕಾರದಲ್ಲಿ ಇರತಕ್ಕಂಥ ವ್ಯಕ್ತಿಗಳು ಅಭಿಪ್ರಾಯ ವ್ಯಕ್ತಪಡಿಸಿದ ಮೇಲೆ ತಾವು ಈ ಬಗ್ಗೆ ಮ್ಯಾಜಿಸ್ಟೀರಿಯಲ್ ಇನ್‌ಕ್ವಾಯರಿ ಅಥವಾ ಪಬ್ಲಿಕ್ ಇನ್‌ಕ್ವಾಯರಿ ನಡೆಸಿ ಇವರ ಸತ್ಯಾಂಶ ಏನು ಎನ್ನುವುದನ್ನು ಬಯಲಿಗೆ ತರಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಪ್ರಧಾನ ಮಂತ್ರಿಗಳು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ಅವರು ಪತ್ರಿಕೆಗಳ ವರದಿ ಅವಲಂಬಿಸಿ ಹೇಳುತ್ತಿದ್ದಾರೆ. ಆದರೆ ಪತ್ರಿಕೆಯಲ್ಲಿ ಬಂದಿರುವುದಕ್ಕೆ ನಮ್ಮ ಸರಕಾರದ ನಿಲುವು ಯಾವುದು ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ.—ಕೇಂದ್ರ ಗೃಹ ಮಂತ್ರಿಗಳು ಪೋಲೀಸ್ ಅಧಿಕಾರಿಗಳ ಬಗ್ಗೆ ಈ ರೀತಿ ಆಪಾದನೆ ಮಾಡಿದ್ದಾರೆ. ಪೋಲೀಸರು ತಮ್ಮ ಅಧಿಕಾರ ಎಕ್ಸೀಡ್ ಮಾಡಿದ್ದಾರೆ, ಕೋರ್ಟ ಆಫ್ ಲಾ ನಲ್ಲಿ ವಿಚಾರಣೆಯಾಗಬೇಕು ಎಂದು ಹೇಳಿದ್ದಾರೆ. ಅದರ ಬಗ್ಗೆ ಸರಕಾರದ ನಿಲವು ಏನು ? ಅದನ್ನು ಸಮರ್ಥನೆ ಮಾಡುತ್ತೀರಾ ಅಥವಾ ಇಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನ್ನ ಪ್ರಶ್ನೆಗೆ ಅವರು ಉತ್ತರ ಹೇಳಲಿಲ್ಲ. ಮೂರು ಜನರ ಭಾಷಣ ಆಗುವವರಗೆ ಅಲ್ಲಿ ಪೋಲೀಸರು ಕೂತಿದ್ದು ಅವರ ಭಾಷಣ ಕೇಳಿ, ಅವರ ಭಾಷಣ ಮುಗಿದ ಮೇಲೆ ಕೊನೆಗೆ ಲಾಠಿ ಚಾರ್ಜ್ ಮಾಡಿದರೇ ? ಅಥವಾ ಮೊದಲೇ ಮಾಡಿದರೇ ? ಶ್ರೀ ಕೊಲ್ಲೂರ ಮಲ್ಲಪ್ಪನವರು ಅಲ್ಲಿ ಭಾಷಣ ಮಾಡಿದರು ಅಲ್ಲವೆ ? ಇದಕ್ಕೆ ಉತ್ತರ ಹೇಳಲಿಲ್ಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಹಾಗೆ ವಿಪರೀತ ಉಪಪ್ರಶ್ನೆಗಳನ್ನು ಕೇಳಬಾರದು ಕ್ಲಾರಿಫಿಕೇಷನ್ ಮಾತ್ರ ಕೇಳಬಹುದು.

Sri K. PUTTASWAMY.—I am sorry I have to read some portion of the statement again. Perhaps I was not understood by the Hon. Member. For the benefit of the House I again read the relevant portion :

"The District Magistrate gave permission specifying that the meeting to be addressed by the M.Ps. and others should be held inside the Town Hall without the aid of amplifiers. At about 6-15 P.M. the Superintendent of Police got information that the meeting was being held outside the Town Hall using amplifiers. The Police Officers promptly went to the spot and told the organizers to hold the meeting inside the Hall without the aid of amplifiers. But, one of the organizers told the Police Officers that they had special permission from the District Magistrate. He was asked to produce this order. But he wanted time till the arrival of Shri Afzalpurkar. Some time later, Shri Afzalpurkar, Sri Chandrasekhar, M.P. Sri Krishnakanth, M.P. and others arrived at the spot to start the meeting. The Assistant Superintendent of Police who was on duty there requested them not to violate the condition of the licence granted to them for holding the meeting. It is reported that they not only refused to do so but announced on the mike they would defy the prohibitory order and started the meeting."

ಶ್ರೀ ಶರಣಗೌಡ ಇನಾಂದಾರ.—ಈ ವಿಷಯುದಲ್ಲಿ ಇವತ್ತು ನಾನೂ ಒಂದು ಅಡ್ಜರ್ನಮೆಂಟ್ ಮೋಷನ್ ಕಳಿಸಿದ್ದೇನೆ. ಅದಕ್ಕೆ ಸ್ಪೀಕರ್ ಸಾಹೇಬರು ಒಂದು ಲೆಟರ್ ಮೂಲಕ ನನಗೆ ಉತ್ತರ ಕೊಟ್ಟಿದ್ದಾರೆ. ಇದೇ ವಿಷಯುದ ಬಗ್ಗೆ ಏಂದು ನಭೆಯಲ್ಲಿ ಕಾಲ್ ಅಟೆನೆಷನ್ ಮೋಷನ್ ಬರಲಿರು ವುದರಿಂದ ನನ್ನ ಅಡ್ಜರ್ನಮೆಂಟ್ ಮೋಷನ್ ಅಂಗೀಕರಿಸಿಲ್ಲ ಎಂದು ನನಗೆ ತಿಳಿಸಿದ್ದಾರೆ. ಈ ರೀತಿ ಸರಕಾರ ಉತ್ತರ ಕೊಡಲಿಕ್ಕೆ ಪ್ರಾರಂಭ ಮಾಡಿದರೆ ದೇಶದಲ್ಲಿ ಸಾಮಾನ್ಯವಾಗಿ ಶಾಂತಿ ಯುತವಾಗಿ ಕೆಲಸಕಾರ್ಯಗಳು ನಡೆಯುಲು ಸಾಧ್ಯವಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಅಂದು ನಾನು ಅಲ್ಲಯೇ ಇದ್ದೆ. "ವಿಥಿನ್ ದಿ ಪ್ರಿಮೈಸಿಸ್ ಆಫ್ ದಿ ಟೌನ್ ಹಾಲ್" ಎಂದು ಪರ್ಮಿಷನ್ ಕೊಟ್ಟಿದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಆದರೆ ಈ ಪ್ರದೇಶದಲ್ಲಿ ಮಬ್ಲಿಕ್ ಮೀಟಿಂಗ್ ಮಾಡುವುದಕ್ಕೆ ಈ ಆರ್ಡರಿನಿಂದ ಎಗ್ಸೆಂಪ್ಟೆಡ್ ಏರಿಯಾ ಆಗಿದೆ. ಯಾಕೆಂದರೆ ಅಲ್ಲಿ ಎಗ್ಜಿಬಿಷನ್ ನಡೆಯುತ್ತಿದೆ. ಅಲ್ಲಿ ಎಗ್ಜಿಬಿಷನ್ ಇರುವುದರಿಂದ ಈ ಕಾನೂನಿನ 35ನೇ ಸೆಕ್ಷನ್ ರಾಗು ಆಗುವುದಿಲ್ಲ. ಡೆಪ್ಯೂಟಿ ಕಮೀಷನರರು ಪರ್ಮಿಷನ್ ಕೊಟ್ಟದ್ದು ಖರೆ ಇದೆ. ಆದರೆ ಒಂದು ಮಾತು ಬಹಳ ವಿಷಾದದಿಂದ ಹೇಳಬೇಕಾಗಿದೆ. ಪ್ರಜಾಪ್ರಭುತ್ವದಲ್ಲಿ ಇದನ್ನು ಹೇಳಲು ನಮಗೆ ಬಹಳ ದುಃಖವಾಗುತ್ತದೆ.

ಉಪಧ್ಯಾಕ್ಷರು.—ಮಾನ್ಯ ಸದಸ್ಯರು ಆ ರೀತಿ ಭಾಷಣವನ್ನು ಮಾಡಬಾರದು.

Sri K. H. PATIL.— * * * *

***Matter not recorded as ordered by the Chair.

Sri K. PUTTASWAMY.—Sir, I do not like to come in the way of Hon. Member Sri Sharan Gowda. I intervened only to read the terms of the licence granted for the information of this House. Sir, the licence reads thus :

"With reference to his application dated 13-2-1970 Sri Dharma Rao, Chairman, D.C.C. Ad hoc Committee, Gulbarga is granted permission for holding workers meeting on 16-2-1970 on the following conditions :

(1) During the pendency of the imposition of the ban as per Section 35 of the Mysore Police Act, the meeting shall be held from 4-00 p.m. to 9-00 p.m. inside the premises of the town hall building ;

(2) There shall be no operation of loudspeakers or amplifiers which is audible beyond the limits of the building.

I, Pratap Singh, District Magistrate do hereby order relaxation of the provisions of Section 35 of the Mysore Police Act within the limits of the Town Hall building only to the above extent for holding the meeting from 4-00 p m. to 9-00 p.m. on 16-2-1970 only to the limits of the Town Hall building situated in the Municipal gardens, Gulbarga."

Sri H. N. NANJE GOWDA.—Sir, I rise to a point of order. My point of order is that the Hon. Minister for Parliamentary Affairs just now stated that according to the licence the permission was given for conducting the meeting within the premises of the Town Hall building, but in the statement read out earlier in reply to call attention notice it was stated that permission was given to hold the meeting inside the town hall building. I feel that the first statement made by the Hon. Minister relying upon the police report should be expunged f om the records because it contradicts the statement of the Hon. Minister which he made relying on the copy of the licence granted.

Mr. DEPUTY SPEAKER.—There is absolutely no point of order.

Sri S. CHANDRAKANTH.—Sir, on that day I had been to Gulbarga. I attended the meeting also. The meetting commenced very late after the scheduled time. After some of the speakers spoke, all of a sudden, the police started manhandling the people gathered there...

Mr. DEPUTY SPEAKER.—I am not going to allow anybody to ask any more clarification on this.

Sri H. M. CHANNABASAPPA.—Sir, I would like to move a motion for breach of privilege. The Hon. A Minister for Parliamentary affairs stated in the beginning that the order of the District Magistrate was that the meeting should take place inside the Town Hall building. I specifically asked him whether it was inside the Town Hall building or within the premises of the building. He said that it was inside the town hall building. Later on the Hon. Minister read out the copy of the licence and order of the District Magistrate wherein it is clearly stated

that the permission was given to hold the meeting within the town hall building premises. Therefore, Sir, the Hon. Minister has deliberately misled this House and he has committed a breach of privilege and this matter will have to be inquired into.

Mr. DEPUTY SPEAKER.—I will study the records and consider as to whether I should give my consent to it or not.

Sri H. SIDDAVEERAPPA.—What I am suggesting is, Mr. Sharan Gowda, who hails from Gulbarga was present at the meeting. He was a witness to what happened there. He has come forward with a statement. Therefore please give him the fullest opportunity to state what happened there so that we may follow it.

Mr. DEPUTY SPEAKER.—I will permit Mr. Sharan Gowda to seek clarification if he wants.

ಶ್ರೀ ಎಸ್. ಚನ್ನಯ್ಯ.—ಸ್ವಾಮಿ, ಶ್ರೀಮಾನ್ ಶರಣಗೌಡರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರಿ. ಅವರು ನಾಲ್ಕು ವಿಷಯಗಳನ್ನು ಮಾತನಾಡುವುದರೊಳಗೆ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದರು. ಅಷ್ಟರಲ್ಲೇ ಅವರನ್ನು ಕುಳಿತುಕೊಳ್ಳಿ ಎಂದು ಹೇಳಿದಿರಿ. ಈ ಸೀಟು ನಲ್ಲಿರುವವರೆಗೂ ನಾವು ತಮಗೆ ಒಬೇ ಮಾಡುತ್ತೇವೆ. ಈ ಸೀಟಿನಿಂದ ಹೊರಗೆ ಹೋದ ಮೇಲೆ ಬೇರೆ ಮಾತು.

ಉಪಾಧ್ಯಕ್ಷರು.—ಕಾಲ್ ಅಟೆನ್‌ಷನ್ ಮೇಲೆ ಶ್ರೀಮಾನ್ ಶರಣಗೌಡರು ಕ್ಲಾರಿಫಿಕೇಷನ್ ಕೇಳಬೇಕು ಎಂದಿದ್ದಕ್ಕೆ ಅವಕಾಶ ಕೊಟ್ಟೆ. ಅವರು ಕ್ಲಾರಿಫಿಕೇಷನ್ ಕೇಳುವ ಬದಲು ಭಾಷಣ ಮಾಡುವುದಕ್ಕೆ ಶುರು ಮಾಡಿದರು. ಅ ಕ್ಕೋನ್ಕರ ನಾನು ಭಾಷಣ ಮಾಡಬೇಡಿ ಎಂದು ಹೇಳಿದೆ.

ಶ್ರೀ ಎಸ್. ಚನ್ನಯ್ಯ.—ಒಬ್ಬರು 5 ನಿಮಿಷದಲ್ಲಿ ಮಾತನಾಡುತ್ತಾರೆ. ಅದೇ ವಿಷಯವನ್ನು ಇನ್ನೊಬ್ಬರು 10 ನಿಮಿಷಗಳಲ್ಲಿ ಮಾತನಾಡುತ್ತಾರೆ, ಶ್ರೀಮಾನ್ ಚಂದ್ರಶೇಖರಪ್ಪನವರು 20 ನಿಮಿಷ ಗಳಲ್ಲ ಮಾತನಾಡುತ್ತಾರೆ. ಆದುದರಿಂದ ತಾವು ಶ್ರೀಮಾನ್ ಶರಣಗೌಡರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಶರಣಗೌಡ ಇನಾಂದಾರ್.—ಸ್ವಾಮಿ, ನಾನು ಮಾಡುವ ಸ್ಟೇಟ್‌ಮೆಂಟ್ ಏನೆಂದರೆ ಅವರು ಏನು ಸ್ಟೇಟ್‌ಮೆಂಟ್ ಮಾಡಿದ್ದಾರೋ ಅದರಲ್ಲಿ ಕೆಲವು ದೋಷಗಳು ಇವೆ ಮತ್ತು ಶುದ್ಧ ತಪ್ಪು ಇವೆ.

ಮೊದಲನೆದಾಗಿ ಈ ಟೌನ್‌ಹಾಲ್‌ನಲ್ಲಿ ಮೀಟಿಂಗ್ ಹೋಲ್ಡ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟಿದ್ದು ನಿಜ. ಅಷ್ಟೇ ಅಲ್ಲ ಮೈಕ್‌ಗೆ ಪರ್ಮಿಷನ್ ಕೊಡದೆ ಇದ್ದರೂ ಪ್ರಾಪಗಾಂಡ ಮಾಡುವುದಕ್ಕೆ ಮೈಕನ್ನು ಉಪಯೋಗ ಮಾಡಲಕ್ಕೆ ಅವಕಾಶ ಕೊಟ್ಟಿದ್ದಾರೆ. ಈ ಊರಿನಲ್ಲಿ ಪ್ರೊಹಿಬಿಟರಿ ಆರ್ಡರ್ ಇದ್ದರೂ ಕೂಡ ಶ್ರೀಮಾನ್ ಚಂದ್ರಶೇಖರ್‌ರವರು ಭಾಷಣ ಮಾಡುತ್ತಾರೆಂದು ಪ್ರಾಪಗಾಂಡ ಮಾಡಿದ್ದರಿಂದ, ಪರ್ಮಿಷನ್ ಕೊಟ್ಟಿದ್ದಾರೆ ಎಂದು ತಿಳಿದುಕೊಂಡು ಜನರು ಬಂದರು. ಅದಾದ ನಂತರ ಧರ್ಮಾರಾವ್ ಅಫ್ ಜಲ್‌ಪುರ್‌ಕರ್, ಶ್ರೀ ಕೃಷ್ಣಕಾಂತ್, ಎಂ.ಪಿ. ಮತ್ತು ಚಂದ್ರಶೇಖರ್, ಎಂ.ಪಿ. ಇವರು ಬಂದು 10 ನಿಮಿಷ ಭಾಷಣ ಮಾಡಿದರು. ಅನಂತರ ಪೋಲೀಸಿನವರು ಬಂದರು. ಶಾಂತರೀತಿಯಿಂದ ಕೂತಿದ್ದ ಜನರಿಗೆ ಹೋಗಿ ಎಂದು ಹೇಳಬಹುದಾಗಿತ್ತು. ಇದು ಅನ್‌ಲಾಫುಲ್ ಅಸೆಂಬ್ಲಿ. ಅವರಿಗೆ ಹೇಳಿದರೂ ಕೇಳುವುದಿಲ್ಲ, ನೀವು ಹೋಗಿರಿ ಎಂದು ಅಲ್ಲಿಯ ಜನರಿಗೆ 5 ನಿಮಿಷ ವೇಳೆ ಕೊಟ್ಟಿದ್ದರೆ ಎಲ್ಲರೂ ಹೋಗುತ್ತಿದ್ದರು. ಅದೂ ಅಲ್ಲದೆ ಅಲ್ಲಿ ಹೊರಗಡೆ ಹೋಗುವುದಕ್ಕೆ ಸುತ್ತಮುತ್ತ ಜಾಗವಿಲ್ಲ, ಒಂದೇ ಒಂದು ಗೇಟು. ಇಂತಹ ಸಂದರ್ಭದಲ್ಲಿ ಪೋಲೀಸಿನವರಿಗೆ ಸಾರ್ವ ಜನಿಕರು ಕಲ್ಲು ಹೊಡೆದಿಲ್ಲ. ಇದು ಶುದ್ಧ ಸುಳ್ಳು. ಜನರೆಲ್ಲಾ ಶಾಂತರೀತಿಯಿಂದಲೇ ಇದ್ದರು. ಈ ಪ್ರಜಾಪ್ರಭುತ್ವದಲ್ಲಿ ಸರ್ಕಾರ ಈ ರೀತಿ ಮಾಡುವುದು ಸರಿಯಲ್ಲ. ಈ ದೃಷ್ಟಿಯಿಂದ ನಾನು ನಿಮ್ಮನ್ನು ಕೇಳುತ್ತಾ ಇದ್ದೇನೆ ಅಲ್ಲಿ ಕಲ್ಲು ಹೊಡೆಯುವಂಥ ಇನ್ಸಿಡೆಂಟ್ ಏನೂ ಆಗಿಲ್ಲ. ಪೋಲೀಸಿ ನವರೇ ವಿನಾಕಾರಣ ರೂಲು ಮೀರಿ ನಡೆದುದನ್ನು ಸರ್ಕಾರ ಏತಕ್ಕೆ ಗಮನಕ್ಕೆ ತೆಗೆದುಕೊಳ್ಳಲ್ಲ? ನೀವು ಪರ್ಮಿಷನ್ ಕೊಟ್ಟಿದ್ದು ಶಾಂತರೀತಿಯಿಂದ ಇರುವ ಜನರ ಮೇಲೆ ಲಾಠಿ ಪ್ರಹಾರ ಮಾಡ ಲಿಕ್ಕೆ ಅವಕಾಶವಾಯಿತು. ಅವರನ್ನು ನಿಮ್ಮನೆ ಹೋಗಿ ಎಂದು ಹೇಳಿದ್ದರೂ ಹೋಗುತ್ತಿದ್ದರು. ಪೋಲೀಸಿನವರು ಲಾಠಿ ಚಾರ್ಜ್ ಮಾಡಿರುವುದು ಅಷ್ಟೇ ಅಲ್ಲ ಒಂದು ಫರ್ಲಾಂಗ್ ದೂರ ಹೋಗಿ

(ಶ್ರೀ ಶರಣಗೌಡ ಇನಾಂದಾರ್)

ಓಡಿಸಿಕೊಂಡು ಹೋಗಿ ಹೊಡೆದಿದ್ದಾರೆ. ತಾವು ಸ್ಟೇಟ್‌ಮೆಂಟ್ ಕೊಟ್ಟಿರುವುದು ತಪ್ಪು. ಆದುದರಿಂದ ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳಬೇಕಾಗಿತ್ತು. ಈ ರೀತಿ ಏತಕ್ಕೆ ಆಯಿತು ಎಂದು ಸರ್ಕಾರದವರು ಪೋಲೀಸಿನವರನ್ನು ಕೇಳಬೇಕು "At this stage a section of the people from the rear of the gathering became violent and started pelting stones." No such thing has been done. ಅಫೀಸರು ಮಾಡಿದ ತಪ್ಪನ್ನು ಮುಚ್ಚಿಕೊಳ್ಳುವುದಕ್ಕೆ ಜನರ ಮೇಲೆ ಅಪವಾದ ಮಾಡಿ ಅವರ ಮೂಲಭೂತ ಹಕ್ಕುಗಳನ್ನು ಹತ್ತಿಕ್ಕುತ್ತಾ ಇದ್ದಾರೆ. ನೀವು ಇದಕ್ಕೆ ಪರ್ಮಿಷನ್ ಕೊಟ್ಟಿರಿ, ಫೈರಿಂಗ್ ನಡೆಯಿತು, ಜನರೂ ಬಂದರು, ನೀವು ಪರ್ಮಿಷನ್ ಕೊಟ್ಟಿದ್ದೀರಿ ಎಂದು. ಈ ರೀತಿ ಶಾಂತರೀತಿಯಿಂದ ಕೇಳುತ್ತಾ ಇದ್ದ ಜನರ ಮೇಲೆ ಲಾಠಿ ಪ್ರಹಾರ ಮಾಡುವಂಥ ಪ್ರಮೇಯ ಏನು ಇತ್ತು ಎಂದು ಕೇಳುತ್ತೇನೆ.

I challenge the Government that this portion of their statement must be proved. ಅವರು ಸಿದ್ಧ ಮಾಡಿದರೆ I will tender my resignation. I will prove that there was no stone throwing or any provocation for the police. Without even giving any prior warning, without asking them to disperse, ಪೋಲೀಸಿನವರು ಜನರ ಮೇಲೆ ಏಕ್‌ದಂ ಲಾಠಿ ಛಾರ್ಜ್ ಮಾಡುವ ಪ್ರಮೇಯ ಏನು ಇತ್ತು? ಜನರು ಅಂತಹ ತಪ್ಪು ಮಾಡಿದ್ದಾರೆ ಅನ್ನುವ ಪರಿಸ್ಥಿತಿಯನ್ನು ಸಿದ್ಧ ಮಾಡಿಕೊಟ್ಟರೆ ನಾನು ರಾಜೀನಾಮೆ ಕೊಡುತ್ತೇನೆ ಇಲ್ಲದಿದ್ದರೆ ನಾನು ಪೋಲೀಸಿನವರು ತಪ್ಪು ಮಾಡಿದ್ದಾರೆ ಎಂದು ಸಿದ್ಧ ಮಾಡಿಕೊಟ್ಟರೆ ಅವರು ರಾಜೀನಾಮೆ ಕೊಡಲಿ ಎಂದು ನಾನು ಕೇಳುತ್ತೇನೆ.

Sri S. SIVAPPA.—Sir, an elderly member of this House has made a specific charge against this Government. So I want a clarification from the Government whether in respect of what has happened, they are going to have a judici l enquiry to go into this affair. That clarification I want.

ಶ್ರೀ ಕೊಂಡಜ್ಜಿ ಬಸಪ್ಪ.—ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡುವಾಗ ಪೋಲೀಸರಿಗೆ ಮಾತ್ರ ಕಲ್ಲೇಟು ಬಿತ್ತು ಎಂದು ಹೇಳಿದರು. ಆದರೆ ಇಲ್ಲಿಗೆ ಬಂದಿದ್ದ ಎಷ್ಟು ಜನ ವಕೀಲರುಗಳಿಗೆ ಹಾಗೂ ಡಾಕ್ಟರುಗಳಿಗೆ ಲಾಠಿ ಚಾರ್ಜು ಆದಾಗ ಬಿದ್ದ ಏಟುಗಳೆಷ್ಟು? ಮತ್ತು ಕಾಲೇಜು ಪ್ರೊಫೆಸರುಗಳು ಬಂದಿದ್ದರು. ಅವರಿಗೆ ಏಟುಗಳು ಬೇಳಲಿಲ್ಲವೇ? ಇವನ್ನೆಲ್ಲಾ ಸ್ಪಷ್ಟವಾಗಿ ಹೇಳಬೇಕು ಮತ್ತು ಯಾವುದನ್ನೂ ಮರೆಮಾಚದಂತೆ ಇಲ್ಲಿ ಹೇಳಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ನನಗೇ ತಿಳಿದಂತೆ ಇಲ್ಲಿಗೆ ಬಂದಿದ್ದ ಸುಮಾರು 30—40 ಮಂದಿ ವಕೀಲರುಗಳಿಗೆ ಗಾಯುಗಳಾಗಿವೆ. 10—20 ಡಾಕ್ಟರುಗಳಿಗೆ ಗಾಯಗಳಾಗಿವೆ ಹಾಗೂ ಕೆಲವು ಜನ ಕಾಲೇಜು ಪ್ರೊಫೆಸರುಗಳಿಗೂ ಗಾಯದ ಏಟುಗಳು ಬಿದ್ದಿವೆ. ಇವನ್ನೆಲ್ಲಾ ಈ ಸಭೆಗೆ ಕೊಡದೇ ಮರೆ ಮಾಚುತ್ತಿದ್ದಾರೆ ಎಂದು ಇಲ್ಲಿ ಹೇಳಬೇಕಾಗಿದೆ.

3-00 P.M.

ಶ್ರೀ ವಿ. ಎನ್. ಪಾಟೀಲ್.—ಸ್ವಾಮೀ, ನನ್ನದೊಂದು ಪಾಯಿಂಟ್ ಆಫ್ ಆರ್ಡರು ಇದೆ. ಈ ಸಭೆಯಲ್ಲಿ ಮಾನ್ಯ ಡೆಪ್ಯೂಟೀ ಹೋಂ ಮಿನಿಸ್ಟರ್‌ರವರು ಇದ್ದಾರೆ. ಆದರೆ ಇಲ್ಲಿ ಮಾನ್ಯ ಹೋಂ ಮಿನಿಸ್ಟರು ಇಲ್ಲ ಎಂದು ಈಗ ನ್ಯಾಯ ಮಂತ್ರಿಗಳಾದ ಶ್ರೀ ಪುಟ್ಟಸ್ವಾಮಯ್ಯನವರು ಉತ್ತರ ಕೊಡುತ್ತಿದ್ದಾರೆ. ಇವರಿಗೆ ಇಲ್ಲಿನ ವಿದ್ಯಮಾನಗಳು ಸರಿಯಾಗಿ ತಿಳಿದಿಲ್ಲ. ಮಾನ್ಯ ಡೆಪ್ಯೂಟೀ ಹೋಂ ಮಿನಿಸ್ಟರ್‌ರವರು ಇದರ ಬಗ್ಗೆ ಹೇಳಿದ್ದರೆ ಸರಿಯಾಗಿರುತ್ತಿತ್ತು. ಇವರ ಬೀಗರೇ ಕೆಲವರು ಇಲ್ಲಿಗೆ ಬಂದು ಗಾಯುಗೊಂಡಿದ್ದಾರೆ. ಅವರು ಇದರ ಬಗ್ಗೆ ಉತ್ತರ ಕೊಟ್ಟಿದ್ದರೆ ನಾವೂ ಕೂಡ ಅವರನ್ನು ಇನ್ನೂ ವಿವರಗಳನ್ನು ಕೇಳಬಹುದಾಗಿತ್ತು.

ಉಪಾಧ್ಯಕ್ಷರು.—ಇದರಲ್ಲೇನೂ ಪಾಯಿಂಟ್ ಆಫ್ ಆರ್ಡರಿಲ್ಲ. ಯಾವ ಮಿನಿಸ್ಟರು ಬೇಕಾದರೂ ಕಾಲಿಂಗ್ ಅಟೆನ್‌ಷನ್ ಬಗ್ಗೆ ಇಲ್ಲಿ ಉತ್ತರ ಕೊಡಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ನನ್ನದೊಂದು ಪಾಯಿಂಟ್ ಆಫ್ ಆರ್ಡರು ಇದೆ. ಇಲ್ಲಿ ಈಗ ಇಂಡಿಕೇಟು ಹಾಗೂ ಸಿಂಡಿಕೇಟುಗಳ ಶಕ್ತಿ ಪ್ರದರ್ಶನವಾಗುತ್ತಿದೆ. ನಾನು ಇದರ ಬಗ್ಗೆ

ಹೆಳುತ್ತಿಲ್ಲ. ಯಾವುದಾದರೂ ಕಾಲ್ ಅಟೆನ್‌ಷನ್ ನೋಟೀಸು ಬಂದಾಗ ಇದರ ಬಗ್ಗೆ ಸ್ಪೆಷಲ್ ಮೆಂಟು ಆದಮೇಲೆ ಒಂದೆರಡು ಕ್ಲಾರಿಫಿಕೇಷನ್ ಕೇಳಬಹುದು ಎಂದಷ್ಟು ತಾವೂ ಇಲ್ಲಿ ಅವಕಾಶ ಕೊಡುತ್ತಿದ್ದೀರಿ. ಆದರೆ ಇಲ್ಲೇನಾಗುತ್ತಿದೆ ಎಂದು ನೋಡಿದರೆ ಚಾರ್ಜ್‌ಷೀಟ್ ಮತ್ತು ಕೌಂಟರು ಚಾರ್ಜುಗಳು ಆಗುತ್ತಿವೆ. ಇದರಲ್ಲಿ ಒಂದು ವಿಚಾರ ಮುಖ್ಯವಾಗಿರುವುದು ಪ್ರಜಾಪ್ರಭುತ್ವದ ಹಕ್ಕಿಗೆ ಧಕ್ಕೆ ಬಂದಿದೆ ಎಂದು ಇಲ್ಲಿ ಇಂತಿಷ್ಟೇ ಜನರು ಬಹಳ ಸೀರಿಯಸ್ ಆಗಿ ಚಾರ್ಜುಗಳನ್ನು ಮಾಡುತ್ತಿದ್ದಾರೆ. ಇದೇ ರೀತಿ ಕಾರ್ಮಿಕರೂ ಕೂಡ ಏಟನ್ನು ತಿಂದಿದ್ದಾರೆ. ಅದರಂತೆ ರೈತರಿಗೂ ಕೆಲವು ಕಡೆಗಳಲ್ಲಿ ಪೋಲೀಸರಿಂದ ಏಟುಗಳು ಬೀಳುತ್ತವೆ. ಹಿಂದೆ ಎಂ. ಇ. ಐ. ಮಷ್ಕರದಲ್ಲಿ ನನಗೂ ಕೂಡ ಏಟುಗಳು ಬಿದ್ದಿವೆ. ಆದುದರಿಂದ ಇದರ ಬಗ್ಗೆ ಕೂಡ ಇಲ್ಲಿ ಹೇಳಲು ನನಗೂ ಸ್ವಲ್ಪ ತಾವು ಅವಕಾಶ ಮಾಡಿಕೊಳಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮೀ, ಮಾನ್ಯ ಸದಸ್ಯರಾದ ಶ್ರೀ ಶರಣಗೌಡರವರು ಇದರ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ಇದು ಯಾವ ರೀತಿ ಆಗಿದೆ, ಏನೇನು ಆಗಿದೆ ಎನ್ನುವ ವಿಚಾರಗಳಿಗೆಲ್ಲಾ ನಾನು ಇಲ್ಲ ಉತ್ತರ ಕೊಡಲು ಅಪೇಕ್ಷಿಸುವುದಿಲ್ಲ. ಕಾರಣ ಇವೆಲ್ಲಾ ವಿಚಾರಗಳು ಈಗ ಕೋರ್ಟಿನಲ್ಲಿವೆ. ಕೋರ್ಟಿನ ಮುಂದೆ ಕೇಸುಗಳಾಗಿವೆ. ಮತ್ತು ಕೋರ್ಟಿನಲ್ಲಿ ಯಾವ ರೀತಿ ತೀರ್ಮಾನವಾಗುತ್ತದೋ ಆಗ ಗೊತ್ತಾಗುತ್ತದೆ. ಎರಡನೆಯದು ಮಾನ್ಯ ಸದಸ್ಯರಾದ ಶ್ರೀಮಾನ್ ಶಿವಪ್ಪನವರು ಇದಕ್ಕೆ ಒಂದು ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಕೇಳಿ ಇದನ್ನು ಮಾಡುತ್ತೀರಾ ಇಲ್ಲವೇ ಎಂದು ಕೇಳಿದರು.

ಶ್ರೀ ಕೆ. ಹೆಚ್. ಪಾಟೀಲ್.—ಇಲ್ಲ ಕೋರ್ಟಿನ ಕೇಸುಗಳ ಬಗ್ಗೆ ಕೇಳುತ್ತಿಲ್ಲ. ಕೋರ್ಟಿಗೆ ಹೋಗಿಲ್ಲವ ಮತ್ತು ಪೋಲೀಸಿನವರಿಂದ ಹೊಡೆದ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಕೇಳುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ವಿಚಾರದಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕಾದ ಅಗತ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ.—ಏಕೆ ಎಂದು ಕೇಳುತ್ತಿದ್ದೇನೆ? ಇದರಲ್ಲಿ ಡಾಕ್ಟರುಗಳು, ರಾಯರುಗಳು ಹಾಗೂ ಕಾಲೇಜು ಪ್ರೊಫೆಸರುಗಳನ್ನು ಹೊಡೆದಿರುವುದು ಸರಿಯಾಗಿದೆಯೋ? ಇದು ಸರಿಯೋ ಇಲ್ಲವೋ ಇದನ್ನು ಹೇಳಿದ್ದರೆ ನಾವು ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಸಭೆಯಲ್ಲಿ ಹೇಳುವ ಅಭಿಪ್ರಾಯಗಳನ್ನು ತಾವು ಒಪ್ಪಲೇ ಬೇಕು ಎಂದು ನಾನು ಹೇಳುತ್ತಿಲ್ಲ. ಅದು ತಮಗೆ ಸೇರಿದ್ದು ಇಷ್ಟ ಇದ್ದರೆ ತಾವು ಒಪ್ಪಬಹುದು ಇಲ್ಲದಿದ್ದರೆ ಬಿಡಬಹುದು.

ಶ್ರೀ ಶರಣಗೌಡ ಇನಾಂದಾರ್.—ಪ್ರೊಹಿಬಿಟರಿ ಆರ್ಡರಿನ ವಿಚಾರ ಬೇರೆ ಆಯಿತು. ಇದರ ಬಗ್ಗೆ ಕೋರ್ಟಿನ ಕಟ್ಟಳೆ ಕೇಳುತ್ತಿಲ್ಲ. ನಾನು ಕೇಳುತ್ತಿರುವುದು ಇಲ್ಲಿನ ಪೋಲೀಸರು ಮಾಡಿದ ಅತ್ಯಾಚಾರಗಳ ಬಗ್ಗೆ ಹಾಗೂ ರಾತ್ರೀ ಚಾರ್ಜುಗಳ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಲೇ ಬೇಕು. ನಿಮ್ಮ ಅಧಿಕಾರಿಗಳು ಇಲ್ಲಿ ತಪ್ಪು ರಿಪೋರ್ಟು ಕೊಡುತ್ತಿದ್ದಾರೆ. ಇದರ ಬಗ್ಗೆ ಸರಿಯಾದ ಉತ್ತರ ಕೊಡಿ ಮತ್ತು ಇದಕ್ಕಾಗಿ ಜುಡಿಷಿಯಲ್ ಎನ್‌ಕ್ವೈರಿ ಅವಶ್ಯಕವಾಗಿ ಆಗಲೇ ಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಇದಕ್ಕೆ ಇಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಅಗತ್ಯವಿಲ್ಲ.

ಶ್ರೀ ಎಸ್. ಶಿವಪ್ಪ.—ಸರಕಾರದ ಈ ಉದ್ದಟತನ ನೋಡಿ ನಮಗೆ ಬಹಳ ವ್ಯಸನವಾಗುತ್ತದೆ. ಎನ್‌ಕ್ವೈರಿ ಮಾಡಲು ಸಾಧ್ಯವಿಲ್ಲ ಎಂದು ಹೇಳುವ ಈ ಸರಕಾರದ ಉತ್ತರವನ್ನು ನಾವು ಪ್ರತಿಭಟಿಸಿ ನಾವೆಲ್ಲರೂ ಈ ಸಭೆಯಿಂದ ವಾಕೌಟು ಮಾಡುತ್ತೇವೆ.

(Members of the Opposition withdrew)

Papers laid on the Table

Sri H. C. BORAIAH (Deputy Minister for Transport).—Sir, On behalf of the Hon. Chief Minister, I lay :

The Third Annual Report of the Mysore State Vigilance Commission for the year 1967–68, under Rule 7 of the Mysore Vigilance Commission Rules, 1965.